ವಾರ್ತಾ ಇಲಾಖೆಯ ಗ್ರಂಥಾಲಯವನ್ನು ಸಾರ್ವಜನಿಕ ಸೌಲಭ್ಯಕ್ಕೆ ಒದಗಿಸುವುದು

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ). — ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯು ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಗ್ರಂಥಾಲಯವನ್ನು ಹೊಂದಿರುವುದು ನಿಜವೇ, ಇದರ ಸಂಖ್ಯೆ ಎಷ್ಟು (ವಿವರ ನೀಡುವುದು) ?

ಆ) ಇಲ್ಲಿರುವ ಗ್ರಂಥಾಲಯಗಳನ್ನು ಸಾರ್ವಜನಿಕರಿಗೆ ಎರವಲು ಕೊಡುವ ವ್ಯವಸ್ಥೆ ಇಲ್ಲದಿರುವುದು ನಿಜವೆ, ಎರವಲು ಕೊಡುವುದಾದಲ್ಲಿ ಯಾವ ಆಧಾರದ ಮೇಲೆ ಯಾರಿಗೆ ಕೊಡಲಾಗುವುದು ?

ಇ) ಅಶಕ್ತರು, ವಿದ್ಯಾರ್ಥಿಗಳು, ಸಂಶೋಧಕರಿಗೆ ಆಗತ್ಯ ಬಿದ್ದಾಗ ಹೆಚ್ಚು ಅಂದರೆ ೧೦೦–೧೫೦ ರೂ. ಗಳ ಠೇವಣಿ ಪಡೆದು ಇಲ್ಲಿರುವ ಗ್ರಂಥಗಳನ್ನು ಎರವಲು ನೀಡುವ ಅವಕಾಶ ಕಲ್ಪಿಸಲಾಗಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಸಚಿವರು). —

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯು ಪರಾಮರ್ಶನಾ ಗ್ರಂಥಾಲಯಗಳನ್ನು ಹೊಂದಿರುವುದು ನಿಜ. ಇವುಗಳ ಸಂಖ್ಯೆ. ೨೩.

ವಿವರ ಈ ರೀತಿ ಇದೆ: —

೧	ಕೇಂದ್ರ ಕಛೇರಿ, ಬೆಂಗಳೂರು	— ೧
೨	ರಾಜ್ಯ ವಾರ್ತಾ ಕೇಂದ್ರ, ಬೆಂಗಳೂರು.	— ೧
೩	ರಾಜ್ಯ ವಾರ್ತಾ ಕೇಂದ್ರ, ಹುಬ್ಬಳ್ಳಿ.	— ೧
೪	ರಾಜ್ಯದ ಒಟ್ಟು ೨೦ ಜಿಲ್ಲೆಗಳ ವಾರ್ತಾ ಕೇಂದ್ರಗಳೆಲ್ಲಿ	— ೨೦

ಆ) ನಿಜ. ಎರವಲು ಕೊಡುವ ವ್ಯವಸ್ಥೆ ಇರುವುದಿಲ್ಲ.

ಇ) ಗ್ರಂಥಾಲಯದಲ್ಲಿ ಗ್ರಂಥಗಳನ್ನು ಪರಾಮರ್ಶಿಸಿ ಹಿಂದಿರುಗಿಸಲು ಅವಕಾಶವಿದೆ.

ಹಾಸನ ಡೈರಿ ಮತ್ತು ಡೈರಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ರೋಸ್ಟರ್ ಪದ್ಧತಿ ಅನುಸರಿಸುವ ಬಗ್ಗೆ

ಶ್ರೀ (ಡಾ.) ಶ್ರೀ ಕೆ ಹೆಚ್, ಹನುಮೇಗೌಡ (ಹಾಸನ). ಮಾನ್ಯ ಅರಣ್ಯ ಹಾಗೂ ಪಶು ಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಾಸನ ಡೈರಿ ಮತ್ತು ಡೈರಿ ಕೋ–ಆಪರೇಟಿವ್ ಸೊಸೈಟಿಗಳ ಯೂನಿಯನ್‌ಗೆ ಅಧಿಕಾರಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ ?

ಆ) ಆಗಿದ್ದಲ್ಲಿ, ಈ ರೀತಿ ರೋಸ್ಟರ್ ಪದ್ಧತಿಯನ್ನು ಅನುಸರಿಸದಿರಲು ಕಾರಣಗಳು ಏನು ?

ಇ) ಈ ರೀತಿ ರೋಸ್ಟರ್ ಪದ್ಧತಿಯನ್ನು ಅನುಸರಿಸದ ಸಂಬಂಧಿಸಿದ ಅಧಿಕಾರಿ ವರ್ಗದವರ ಮೇಲೆ ಏನು ಕ್ರಮ ಸರ್ಕಾರ ತೆಗೆದುಕೊಳ್ಳಲಿದೆ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನ ಸಚಿವರು). —

ಅ) ೧–೬–೧೯೮೭ರಿಂದ ರೋಸ್ಟರ್ ಪದ್ಧತಿಯನ್ನು ಪೂರ್ಣವಾಗಿ ಅನುಸರಿಸಿರುವುದಿಲ್ಲ.

ಆ) ಹಾಸನ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಸ್ವ–ಹಿತಾಸಕ್ತಿ ಮತ್ತು ಮನಸ್ಸೋ ಇಚ್ಛೆ ನೇಮಕಾತಿಯೇ ಕಾರಣ.

ಇ) ಈ ರೀತಿ ಸರ್ಕಾರದ ನೀತಿ ನಿಯಮಗಳ ಉಲ್ಲಂಘನೆಯಾದ ಬಗ್ಗೆ ಸಹಕಾರ ಸಂಘಗಳ ಕಾಯ್ದೆ ೧೯೫೯ ಸೆಕ್ಷನ್ ೬೪ರ ಅನ್ವಯ ವಿಚಾರಣೆ ನಡೆಸಲಾಗಿದ್ದು ಸದರಿ ವಿಚಾರಣಾ ಪರದಿಯ ಶಿಫಾರಸ್ಸಿನನ್ವಯ ಹಾಸನ ಹಾಲು ಒಕ್ಕೂಟದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಹಾಸನ ಜಿಲ್ಲಾಧಿಕಾರಿಯವರನ್ನು ಸದರಿ ಒಕ್ಕೂಟಕ್ಕೆ ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ. ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿ ಕರ್ನಾಟಕ ಹಾಲು ಮಹಾ ಮಂಡಳಿಯ (ಕೆ. ಎಂ. ಎಫ್) ವ್ಯವಸ್ಥಾಪಕ ನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಹಾಸನ ಜಿಲ್ಲೆ ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಯೋಜನೆಯ ಹಣ ದುರುಪಯೋಗ

ಶ್ರೀ (ಡಾ||) ಬಿ. ಶಿವರಾಮು (ಗಂಡಸಿ).—ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಹಣವನ್ನು ದುರುಪಯೋಗ ಮಾಡಿಕೊಂಡು ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಇದಕ್ಕೆ ಯಾವುದೇ ತಾಂತ್ರಿಕ ಮಂಜೂರಾತಿ ನೀಡಿರುವುದಿಲ್ಲ ಮತ್ತು ಮಣ್ಣು ಪರೀಕ್ಷೆಯನ್ನು ಮಾಡಿಸದೆ ಕಟ್ಟಿರುವುದು ಗಮನಕ್ಕೆ ಬಂದಿದೆಯೇ ?

ಇ) ಇದಕ್ಕೆ ಒಟ್ಟು ಎಷ್ಟು ಹೊತ್ತವನ್ನು ವಿರ್ಚು ಮಾಡಲಾಗಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯವರು ಅಂಗಡಿ ಮಳಿಗೆಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ದಿನಾಂಕ ೮-೬-೯೦ ರಂದು ಕೊಟ್ಟಿರುವ ತಾಂತ್ರಿಕ ಮಂಜೂರಾತಿಯನ್ನು ಮಣ್ಣು ಪರೀಕ್ಷೆ ಮಾಡಿಸಿಲ್ಲವೆಂದು ದಿನಾಂಕ ೧೨-೬-೯೦ ರಂದು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಈಗ ಬಂದಿರುತ್ತದೆ.

ಇ) ಕಾರ್ಯಗತವಾದ ಕಾಮಗಾರಿಯ ವೆಚ್ಚವು ಸುಮಾರು ೧೦,೫೦೦-೦೦ ರೂ. ಗಳಾಗಿರುತ್ತದೆ ಈ ವರೆಗೆ ಯಾವ ಹೊತ್ತವನ್ನು ಪಾವತಿ ಮಾಡಿರುವುದಿಲ್ಲ.

ಹಾಸನ ಡೈರಿಯಲ್ಲಿ ನೌಕರರ ಮಜಾ ಮಾಡಿರುವ ಬಗ್ಗೆ

ಶ್ರೀ(ಡಿ.ಟಿ.ಲಿ) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾಸನದ ಡೈರಿಯಲ್ಲಿ ಎಷ್ಟು ಜನ ನೌಕರರು ಕೆಲಸದಿಂದ ಮಜಾ ಆಗಿದ್ದಾರೆ?

ಆ) ಕೆಲಸದಿಂದ ಮಜಾ ಆದವರ ಹುದ್ದೆ ಮತ್ತು ವಿವರ ಕೊಡುವುದು?

ಇ) ಈ ರೀತಿ ಕೆಲಸದಿಂದ ಮಜಾ ಆಗಲು ಕಾರಣಗಳು ಏನು?

ಈ) ಇವರುಗಳಲ್ಲಿ ಎಷ್ಟು ಜನ ಅಧಿಕಾರಿಗಳು ಮಜಾ ಆರ್ಡರ್ ವಿರುದ್ಧ ಲೇಬರ್ ಕೋರ್ಟ್‌ಗೆ ಯಾವ ಯಾವ ತಾರೀಖಿನಂಗಳಲ್ಲಿ ಪಿರ್ಯಾದು ಸಲ್ಲಿಸಿದ್ದಾರೆ? (ವಿವರ ಕೊಡುವುದು)